**<u>ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರ ದ ನ್ಯಾದಂ.ರವರ ನ್ಯಾಯಾಲಯ, ಹೆಚ್.ಡಿ.ಕೋಟೆ</u>**

**<u>ಸಿ.ಸಿ.ನಂ. 567/2019</u>**

ಫಿರ್ಯಾದಿ : ಸರ್ಕಾರದ ಪರವಾಗಿ ಹೆಚ್.ಡಿ.ಕೋಟೆ ಪೋಲೀಸ್ ಠಾಣೆ

**-ವಿರುದ್ಧ-**

ಆರೋಪಿ : ಪ್ರದೀಪ.ಆರ್
ಬಿನ್ ರಾಜಗೋಪಾಲ ಪಿಳ್ಳೆ, 42 ವರ್ಷ,
ವಾಸಃ ಹಂಪಾಪುರ ಗ್ರಾಮ
ಹೆಚ್ ಡಿ ಕೋಟೆ ತಾಲ್ಲೂಕು,
ಮೈಸೂರು ಜಿಲ್ಲೆ.

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರಡಿಯಲ್ಲಿ ಆರೋಪಿಯ ಹೇಳಿಕೆಃ</u>

ಪ್ರಶ್ನೆ-01: ಈ ಪ್ರಕರಣದಲ್ಲಿ ಪಿರ್ಯಾದಿದಾರರ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರು ಹೇಳಿರುವ ಸಾಕ್ಷ್ಯಗಳನ್ನು ನೀವು ಕೇಳಿದ್ದೀರಾ ?

ಉತ್ತರ :

ಪ್ರಶ್ನೆ-02: ಫ್ರಾಸಾ.01, ಲಿಂಗರಾಜು, ಕೋಹಳ ಗ್ರಾಮ ಇವರು ತಮ್ಮ ಸಾಕ್ಷ್ಯದಲ್ಲಿ ಮೃತ ನಾಗರಾಜು ನನ್ನ ಮಗ. ದಿನಾಂಕ 25.10.2017 ರಂದು ನನ್ನ ಮಗನಿಗೆ ಜ್ವರ ಬಂದಿರುತ್ತದೆ, ಆತನಿಗೆ ಚಿಕಿತ್ಸೆ ಕೊಡಿಸಲು ಈ ಕೇಸಿನ ಆರೋಪಿ ಮಾರ್ಚಳ್ಳಿಯಲ್ಲಿ ಇಟ್ಟಿರುವ ಕ್ಲಿನಿಕ್‌ಗೆ ಕರೆದುಕೊಂಡು ಹೋಗಿರುತ್ತೇನೆ. ಆರೋಪಿ ನನ್ನ ಮಗನನ್ನು ಪರೀಕ್ಷಿಸಿ ಎರಡು ಇಂಜಕ್ಷನ್‌ಗಳನ್ನು ಕುಂಡಿಗಳಿಗೆ ನೀಡಿರುತ್ತಾರೆ. ಮರುದಿನ ನನ್ನ ಮಗನಿಗೆ ಇಂಜೆಕ್ಷನ್ ಮಾಡಿದ ಸ್ಥಳದಲ್ಲಿ ಊತ ಬಂದಿರುತ್ತದೆ, ಆ ಕಾರಣ ನನ್ನ ಮಗನನ್ನು ಅರೋಪಿ ಬಳಿಗೆ

ಕರೆದುಕೊಂಡು ಹೋಗಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-03: ಫ್ರಾಸಾ.01 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆಗ ಆರೋಪಿ ನನ್ನ ಮಗನನ್ನು ಪರೀಕ್ಷಿಸಿ ಉಪ್ಪಿ ನ ಅಥವಾ ಬಿಸಿನೀರಿನ ಕಾವು ನೀಡಿ ಸರಿ ಹೋಗುತ್ತದೆ ಎಂದು ಹೇಳಿ ಮಾತ್ರೆಗಳನ್ನು ನೀಡಿರುತ್ತಾರೆ. ನನ್ನ ಮಗನಿಗೆ ಹೆಚ್ಚಿನ ನೋವು ಇದ್ದ ಕಾರಣ ಆರೋಪಿ ಬಳಿ ಕರೆದುಕೊಂಡು ಹೋಗಿರುತ್ತೇನೆ. ಆರೋಪಿ ನನ್ನ ಮಗನಿಗೆ ಚಿಕಿತ್ಸೆ ನೀಡದೇ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-04: ಫ್ರಾಸಾ.01 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆಗ ನಾನು ನನ್ನ ಮಗನನ್ನು ಕೆ.ಆರ್.ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಆಗ ಅತನನ್ನು ಅಸ್ಪತ್ರೆಯಲ್ಲಿ ದಾಖಲು ಮಾಡಿರುತ್ತೇನೆ, ಆಗ ವೈದ್ಯರು ನನ್ನ ಮಗನಿಗೆ ಇಂಜಕ್ಷನ್ ನೀಡಿದ ಸ್ಥಳದಲ್ಲಿ ಗ್ಯಾಸ್ ಗ್ಯಾಂಗ್ರಿನ್ ಆಗಿರುತ್ತದೆ ಎಂದು ಹೇಳಿ ನನ್ನ ಮಗನು ಉಳಿಯುವುದು ಕಷ್ಟ ಎಂದು ಹೇಳಿರುತ್ತಾರೆ. ಅಲ್ಲಿಂದ ನಾನು ಹೆಚ್ಚಿ ನ ಚಿಕಿತ್ಸೆಗೆ ಆತನನ್ನು ಮೈಸೂರಿನ ಜೆ.ಎಸ್.ಎಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-05: ಫ್ರಾಸಾ.01 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಜೆ.ಎಸ್.ಎಸ್ ಆಸ್ಪತ್ರೆಯಲ್ಲಿ ನನ್ನ ಮಗನಿಗೆ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾನೆ. ಆರೋಪಿ ಆಗ ನಮ್ಮ ಬಳಿ ಬಂದು ನೀವು ದೂರನ್ನು ಕೊಡಬೇಡಿ, ನಾನು ನಿಮಗೆ ಪರಿಹಾರ ಹಣ ನೀಡುತ್ತೇನೆ ಎಂದು ಹೇಳಿ, ನಮಗೆ ಒಂದು ಕರಾರುಪತ್ರ ಬರೆದುಕೊಟ್ಟಿರುತ್ತಾರೆ, ಆದರೆ ನಮಗೆ ಯಾವುದೇ ಹಣ ನೀಡಿರುವುದಿಲ್ಲ. ಆರೋಪಿ ಮಾತನ್ನು ಕೇಳಿಕೊಂಡು ನನ್ನ ಮಗನನ್ನು ದಿನಾಂಕ 28.10.2017 ರಂದು ದಫನ್ ಮಾಡಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-06: ಫ್ರಾಸಾ.01 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆರೋಪಿ ತಾನು ಹೇಳಿದಂತೆ ನಮಗೆ ಪರಿಹಾರ ನೀಡದ ಕಾರಣ ಪೋಲಿಸ್ ಠಾಣೆಗೆ ಹೋಗಿ ಆರೋಪಿ ವಿರುದ್ಧ ದಿನಾಂಕ 26.3.2018 ರಂದು ದೂರು ನೀಡಿರುತ್ತೇನೆ. ಮರುದಿನ ನಾನು ಪೋಲಿಸರನ್ನು ಕರೆದುಕೊಂಡು ಹೋಗಿ ಆರೋಪಿ ಮನೆ ತೋರಿಸಿರುತ್ತೇನೆ. ಪೋಲಿಸರು ನನ್ನ ಮಗನನ್ನು ದಫನ್ ಮಾಡಿದ ಸ್ಥಳಕ್ಕೆ ಬಂದು ನನ್ನ ಮಗನ ಶವವನ್ನು ತೆಗೆದು ಮರಣೋತ್ತರ ಪರೀಕ್ಷೆಗೆ ತೆಗೆದುಕೊಂಡು ಹೋಗಿರುತ್ತಾರೆ ಹಾಗೂ ಪಂಚನಾಮೆ ಜರುಗಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-07: ಫ್ರಾಸಾ.01 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆರೋಪಿ ನನ್ನ ಮಗನ ಸಾವಿಗೆ ಕಾರಣಕರ್ತನಾಗಿರುತ್ತಾನೆ, ಆತ ನಕಲಿ ವೈದ್ಯನಾಗಿದ್ದು ನನ್ನ ಮಗನಿಗೆ ತಪ್ಪಾಗಿ ನೀಡಿದ ಇಂಜಕ್ಷನ್ ನಿಂದ ನನ್ನ ಮಗ ಮೃತಪಟ್ಟಿರುತ್ತಾನೆ. ಸಾಕ್ಷಿ

ದೂರು, ಸ್ಥಳ ಮತ್ತು ಶವವನ್ನು ದಫನ್ ಮಾಡಿದ ಸ್ಥಳದ ಪಂಚನಾಮೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ1 ರಿಂದ ನಿಪಿ3 ಎಂದು, ಸಾಕ್ಷಿ ಸಹಿಯನ್ನು ನಿಪಿ1 ಎ ರಿಂದ ನಿಪಿ3 ಎ ಎಂದು ಗುರುತಿಸಲಾಯಿತು ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-08: ಫ್ರಾಸಾ.01 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಪೋಲಿಸರು ನನ್ನ ಮಗನ ಶವ ಪಂಚನಾಮೆಯನ್ನು ಸಹ ಜರುಗಿಸಿರುತ್ತಾರೆ, ಅದನ್ನು ನಿಪಿ4 ಎಂದು, ಸಾಕ್ಷಿ ಸಹಿಯನ್ನು ನಿಪಿ4 ಎ ಎಂದು ಗುರುತಿಸಲಾಯಿತು. ಶವ ಹೂತಿದ್ದ ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ5 ರಿಂದ ನಿಪಿ14 ಎಂದು ಗುರುತಿಸಲಾಯಿತು. ಅರೋಪಿ ನೋಡಿದರೆ ಗುರುತಿಸುತ್ತೇನೆ, ಈ ದಿನ ನ್ಯಾಯಾಲಯದ ಮುಂದಿರುತ್ತಾನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-09: ಫ್ರಾಸಾ.05, ಮುತ್ತಮ್ಮ, ಕೋಹಳ ಗ್ರಾಮ ಇವರು ತಮ್ಮ ಸಾಕ್ಷ್ಯದಲ್ಲಿ ಮೃತ ನಾಗರಾಜು ನನ್ನ ಮಗ. ಚಾಸ 1 ನನ್ನ ಗಂಡ. ಸುಮಾರು 4 ವರ್ಷದ ಹಿಂದೆ ನನ್ನ ಮಗನಿಗೆ ಜ್ವರ ಬಂದಿರುತ್ತದೆ. ಆತನನ್ನು ಹಂಪಾಪುರದಲ್ಲಿರುವ ಆರೋಪಿಯ ಕ್ಲಿನಿಕ್‌ಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತೇನೆ. ಆಗ ಅವರು ಇಂಜಕ್ಷನ್ ನೀಡಿರುತ್ತಾರೆ. ಮರುದಿನ ಆತನಿಗೆ ಇಂಜಕ್ಷನ್ ಮಾಡಿದ ಜಾಗದಲ್ಲಿ ಊತ ಬಂದಿರುತ್ತದೆ. ಆ ಕಾರಣ ಪುನಃ ಆರೋಪಿ ಬಳಿ ಚಿಕಿತ್ಸೆಗೆ ಕರೆದುಕೊಂಡು ಹೋದಾಗ ಆತ ಕುಂಡಿಗೆ ಬಿಸಿ ಶಾಖ ನೀಡಿ, 2

ಮಾತ್ರೆಗಳನ್ನು ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-10: ಫ್ರಾಸಾ.05 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನನ್ನ ಮಗನ ಕುಂಡಿಗೆ ಇನಪೆಕ್ಷನ್ ಆಗಿ ಕೀವು ಬರುತ್ತಿತ್ತು. ಆ ಕಾರಣ ಪುನಃ ಆರೋಪಿ ಬಳಿ ಕರೆದುಕೊಂಡು ಹೋದಾಗ, ಆತ ನನ್ನ ಮಗನನ್ನು ಪರೀಕ್ಷಿಸದೇ ಮೈಸೂರಿಗೆ ಕರೆದುಕೊಂಡು ಹೋಗಲು ತಿಳಿಸಿರುತ್ತಾನೆ. ಮೈಸೂರಿನ ಕೆ.ಆರ್.ಅಸ್ಪತ್ರೆಗೆ ಕರೆದುಕೊಂಡು ಹೋದಾಗ ಅವರು ನನ್ನ ಮಗನನ್ನು ಪರೀಕ್ಷಿಸಿ ಆತ ಬದುಕುವುದು ಕಷ್ಟ ಎಂದು ಹೇಳಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-11: ಫ್ರಾಸಾ.05 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆ ಕಾರಣ ನನ್ನ ಮಗನನ್ನು ಮೈಸೂರಿನ ಜೆ.ಎಸ್.ಎಸ್ ಆಸ್ಪತ್ರೆಗೆ ದಾಖಲು ಮಾಡಿರುತ್ತೇವೆ. ಆದರೆ ಚಿಕಿತ್ಸೆ ಫಲಕಾರಿಯಾಗದೇ ನನ್ನ ಮಗ ಮೃತಪಟ್ಟಿರುತ್ತಾನೆ. ನನ್ನ ಮಗ ಮೃತಪಟ್ಟ ವಿಚಾರವನ್ನು ಆರೋಪಿಗೆ ಹೇಳಿದಾಗ, ಪರಿಹಾರವಾಗಿ 10 ಲಕ್ಷ ನೀಡುವುದಾಗಿ ತಿಳಿಸಿರುತ್ತಾನೆ. ಆ ಕಾರಣ ನನ್ನ ಮಗನನ್ನು ದಪನ್ ಮಾಡಿರುತ್ತೇವೆ. ಸ್ವಲ್ಪ ದಿನಗಳ ನಂತರ ಆರೋಪಿ ಬಳಿ ಹೋಗಿ ಪರಿಹಾರದ ಹಣ ಕೇಳಲಾಗಿ ಆತ ನೀಡುವುದಿಲ್ಲ ಎಂದು ತಿಳಿಸಿರುತ್ತಾನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-12: ಫ್ರಾಸಾ.05 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಹಣ ನೀಡಲಾಗುವುದಿಲ್ಲ ಎಂದು ಒಂದು ಮನೆಯನ್ನು ನನ್ನ ಮೈದನ ಹೆಸರಿಗೆ ಕರಾರು ಮಾಡಿರುತ್ತಾನೆ. ಸದರಿ ಮನೆಯನ್ನು ಸಹ ಆರೋಪಿ ನಮಗೆ ನೀಡಿರುವುದಿಲ್ಲ, ಆ ಕಾರಣ ನನ್ನ ಗಂಡ ಪೋಲಿಸರಿಗೆ ದೂರು ನೀಡಿರುತ್ತಾರೆ. ಪೋಲಿಸರು ನನ್ನ ಮಗನ ಮೃತದೇಹವನ್ನು ಪುನಃ ಹೊರತೆಗೆದು ಶವ ತನಿಖೆ ಮಾಡಿಸಿರುತ್ತಾರೆ. ಆರೋಪಿ ನೋಡಿದರೆ ಗುರುತಿಸುತ್ತೇನೆ, ಈ ದಿನ ನ್ಯಾಯಾಲಯದ ಮುಂದೆ ಇರುತ್ತಾನೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-13: ಫ್ರಾಸಾ.06, ಮಂಜುಸ್ವಾಮಿ, ಮೈಸೂರು ಇವರು ತಮ್ಮ ಸಾಕ್ಷ್ಯದಲ್ಲಿ ಮೃತ ನಾಗರಾಜು ನನ್ನ ಅಣ್ಣನ ಮಗ. ದಿನಾಂಕ 25.10.2017 ರಂದು ನನ್ನ ಅಣ್ಣನ ಮಗನಾದ ನಾಗರಾಜುಗೆ ಅನಾರೋಗ್ಯವಿದ್ದ ಕಾರಣ ಆತನನ್ನು ಚಾಸ 1 ಮತ್ತು 10 ರವರು ಈ ಕೇಸಿನ ಆರೋಪಿ ಬಳಿ ಚಿಕಿತ್ಸೆ ಗೆ ಕರೆದುಕೊಂಡು ಹೋಗಿರುತ್ತಾರೆ. ಈ ಕೇಸಿನ ಆರೋಪಿ ನಾಗರಾಜು ಕುಂಡಿಗೆ ಇಂಜಕ್ಷನ್ ನೀಡಿರುತ್ತಾರೆ. ಆತನ ಕುಂಡಿ ನೋವಿನಿಂದ ಕೂಡಿದ ಕಾರಣ ಮರುದಿನ ಆತನನ್ನು ಆರೋಪಿ ಬಳಿ ಪುನಃ ಕರೆದುಕೊಂಡು ಹೋದಾಗ, ಆರೋಪಿ ಮಾತ್ರೆಯನ್ನು ನೀಡಿ ಬಿಸಿನೀರು ಶಾಖ ನೀಡಬೇಕೆಂದು ತಿಳಿಸಿ ಕಳುಹಿಸಿರುತ್ತಾನೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-14: ಫ್ರಾಸಾ.06 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಮರುದಿನ ಸದರಿ ಕುಂಡಿ ಕೀವಿನಿಂದ ಕೂಡಿದ ಕಾರಣ ಪುನಃ ಆತನನ್ನು ಆರೋಪಿ ಬಳಿ ನನ್ನ ಅಣ್ಣ ಹಾಗೂ ಅತ್ತಿಗೆ ಕರೆದುಕೊಂಡು ಹೋದಾಗ, ಆರೋಪಿ ನಾಗರಾಜುರವರನ್ನು ಹೆಚ್ಚಿ ನ ಚಿಕಿತ್ಸೆಗೆ ಮೈಸೂರಿನ ಕೆ.ಆರ್.ಆಸ್ಪತ್ರೆ ಗೆ ಕರೆದುಕೊಂಡು ಹೋಗಲು ತಿಳಿಸಿರುತ್ತಾನೆ. ಅದರಂತೆ ಅತನನ್ನು ಮೈಸೂರಿನ ಕೆ.ಆರ್.ಆಸ್ಪತ್ರೆ ಚಿಕಿತ್ಸೆಗೆ ದಾಖಲು ಮಾಡಿರುತ್ತಾರೆ. ವೈದ್ಯರು ನಾಗರಾಜುರವರನ್ನು ಪರೀಕ್ಷಿಸಿ ಅತನು ಬದುಕುವುದ ಕಷ್ಟ ಎಂದು ಹೇಳಿರುತ್ತಾರೆ. ನಾನು ಕೆ.ಆರ್.ಆಸ್ಪತ್ರೆಗೆ ಹೋಗಿ ನಂತರ ಮೈಸೂರಿನ ಜೆ.ಎಸ್.ಎಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-15: ಫ್ರಾಸಾ.06 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಾಗರಾಜು ರವರ ಚಿಕಿತ್ಸೆ ಫಲಕಾರಿಯಾಗದೇ ದಿನಾಂಕ 28.10.2017 ರಂದು ಮೃತಪಟ್ಟಿರುತ್ತಾನೆ. ನಂತರ ದೇಹವನ್ನು ಹಂಪಾಪುರ ಗ್ರಾಮಕ್ಕೆ ತಂದಿರುತ್ತೇವೆ. ಆರೋಪಿ ನಾನು ವೈದ್ಯನಾಗಿರುವುದಿಲ್ಲ, ತಪ್ಪಿನ ಚಿಕಿತ್ಸೆ ನೀಡಿರುತ್ತೇನೆ, ಪರಿಹಾರ ಕೊಡುತ್ತೇನೆ, ದೂರು ನೀಡಬೇಡಿ ಎಂದು ಹೇಳಿರುತ್ತಾನೆ. ಆರೋಪಿ 10 ಲಕ್ಷ ಪರಿಹಾರ ಕೊಡುವುದಾಗಿ ಒಪ್ಪಿರುತ್ತಾನೆ, ಅದಕ್ಕೆ ನಾವು ಒಪ್ಪಿ ರುತ್ತೇವೆ. ನಾಗರಾಜುರವರನ್ನು ನಮ್ಮ ಜಮೀನಿನಲ್ಲಿ ದಪನ್ ಮಾಡಿರುತ್ತೇವೆ. ಅರೋಪಿ ಎಷ್ಟು ದಿನಗಳಾದರೂ ಸಹ ತಾನು ಒಪ್ಪಿ

ಕೊಂಡಂತೆ ಪರಿಹಾರ ನೀಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-16: ಫ್ರಾಸಾ.06 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆತ ಹಣ ನೀಡುವುದಾಗಿ ಒಂದು ಆಧಾರಪತ್ರ ಸಹ ಬರೆದುಕೊಟ್ಟಿರುತ್ತಾರನೆ. ಆದರೆ ಆತ ನೀಡದೇ ಮೋಸ ಮಾಡಿದ ಕಾರಣ ಚಾಸ 1 ರವರು ಠಾಣೆಗೆ ಹೋಗಿ ದೂರು ನೀಡಿರುತ್ತಾರೆ. ಪೋಲಿಸರು ದೂರು ಪಡೆದುಕೊಂಡ ನಂತರ ಮೃತದೇಹವನ್ನು ತೆಗೆದು ಮರಣೋತ್ತರ ಪರೀಕ್ಷೆ ಮಾಡಿಸಿರುತ್ತಾರೆ. ಆರೋಪಿ ನೋಡಿದರೆ ಗುರುತಿಸುತ್ತೇನೆ, ಈ ದಿನ ನ್ಯಾಯಾಲಯದ ಮುಂದಿರುತ್ತಾನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-17: ಫ್ರಾಸಾ.07, ಮಹದೇವಸ್ವಾಮಿ, ಧನಗಳ್ಳಿ ಇವರು ತಮ್ಮ ಸಾಕ್ಷ್ಯದಲ್ಲಿ ಮೃತ ನಾಗರಾಜು ನನ್ನ ದೊಡ್ಡಪ್ಪನ ಮಗ. ಆತನನ್ನು ಚಿಕಿತ್ಸೆಗೆ ದಾಖಲು ಮಾಡಿದ್ದು, ಆತ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾನೆ ಎಂದು ಚಾಸ 1 ರವರು ತಿಳಿಸಿರುತ್ತಾರೆ. ಆಗ ನಾನು ಅಸ್ಪತ್ರೆ ಬಳಿ ಹೋಗಿ, ಚಾಸ 1 ರವರನ್ನು ವಿಚಾರಿಸಲಾಗಿ ಆತ ಮಗನಾದ ನಾಗರಾಜುವರಿಗೆ ಜ್ವರ ಇದ್ದ ಕಾರಣ ಆತನನ್ನು ಆರೋಪಿ ಬಳಿ ಚಿಕಿತ್ತೆಗೆ ಕರೆದುಕೊಂಡು ಹೋಗಿದ್ದಾಗಾ, ಅತ ಇಂಜಕ್ಷನ್ ಮಾಡಿರುತ್ತಾನೆ. ಅದರಿಂದ ನಾಗರಾಜು ರವರಿಗೆ ಹೊಟ್ಟೆ ಮತ್ತು ದೇಹದ ಇತರ ಭಾಗದಲ್ಲಿ ನೋವು ಕಾಣಿಸಿರುತ್ತಾದೆ. ಪುನಃ ಆತನನ್ನು ಆರೋಪಿ ಬಳಿ ಕರೆದುಕೊಂಡು ಹೋದಾಗ ನಾಗರಾಜುರವರನ್ನು ಪರೀಕ್ಷಿಸಿ

ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಜೆ.ಎಸ್.ಎಸ್ ಆಸ್ಪತ್ರೆಗೆ ದಾಖಲು ಮಾಡಿರುತ್ತೇವೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-18: ಫ್ರಾಸಾ.07 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆದರೆ ಚಿಕಿತ್ಸೆ ಫಲಕಾರಿಯಾಗದೇ ಆತ ಮೃತಪಟ್ಟಿರುತ್ತಾನೆ ಎಂದು ತಿಳಿಸಿರುತ್ತಾರೆ. ನಂತರ ದೇಹವನ್ನು ಹಂಪಾಪುರ ಗ್ರಾಮಕ್ಕೆ ತಂದಿರುತ್ತೇವೆ. ಆರೋಪಿ ನಾನು ವೈದ್ಯನಾಗಿರುವುದಿಲ್ಲ, ತಪ್ಪಿನ ಚಿಕಿತ್ಸೆ ನೀಡಿರುತ್ತೇನೆ, ಪರಿಹಾರ ಕೊಡುತ್ತೇನೆ, ದೂರು ನೀಡಬೇಡಿ ಎಂದು ಹೇಳಿರುತ್ತಾನೆ. ಆಗ ಆರೋಪಿ ನನ್ನ, ಚಾಸ 15, 12, 13, 17 ಮತ್ತು 21 ರವರ ಸಮಕ್ಷಮ 10 ಲಕ್ಷ ಪರಿಹಾರ ಕೊಡುವುದಾಗಿ ಒಪ್ಪಿರುತ್ತಾನೆ, ಅದಕ್ಕೆ ಚಾಸ 1 ರವರು ಒಪ್ಪಿರುತ್ತಾರೆ. ಆರೋಪಿ ನೋಡಿದರೆ ಗುರುತಿಸುತ್ತೇನೆ, ಈ ದಿನ ನ್ಯಾಯಾಲಯದ ಮುಂದಿರುತ್ತಾನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-19: ಫ್ರಾಸಾ.08, ರೇವಣ್ಣ, ಪುರ ಇವರು ತಮ್ಮ ಸಾಕ್ಷ್ಯದಲ್ಲಿ ನನಗೆ ಚಾಸ 1 ರವರ ಪರಿಚಯವಿರುತ್ತದೆ. 25.10.2017 ರಂದು ಚಾಸ 1 ರವರ ಮಗನಿಗೆ ಜ್ವರ ಇದ್ದು ಆತನಿಗೆ ಆರೋಪಿ ಬಳಿ ಚಿಕಿತ್ಸೆ ಕೊಡಿಸಿರುತ್ತಾರೆ. ಆತನಿಗೆ ಜ್ವರ ಕಡಿಮೆಯಾಗದ ಕಾರಣ ಮೂರು ದಿನಗಳು ಸತತವಾಗಿ ಆರೋಪಿ ಬಳಿ ಚಿಕಿತ್ಸೆ ಕೊಡಿಸಿರುತ್ತಾರೆ. ಆರೋಪಿ ಇಂಜಕ್ಷನ್ ನೀಡಿದ ಸ್ಥಳದಲ್ಲಿ ಊತ ಬಂದಿರುತ್ತದೆ. ಅದಕ್ಕೆ ಆರೋಪಿ ಉಪ್ಪಿನ ಶಾಖ ಕೊಡಲು ತಿಳಿಸಿರುತ್ತಾನೆ. ಆದರೆ ಏನು ಪ್ರಯೋಜನ ವಾಗಿರುವುದಿಲ್ಲ. ಆಗ ದಿನಾಂಕ 28.10.217

ರಂದು ಆರೋಪಿ ಬಳಿ ಚಾಸ 1 ರವರ ಮಗನನ್ನು ಕರೆದುಕೊಂಡು ಹೋದಾಗ ಹೆಚ್ಚಿ ನ ಚಿಕಿತ್ಸೆಗೆ ಮೈಸೂರಿಗೆ ಕರೆದುಕೊಂಡು ಹೋಗಲು ತಿಳಿಸಿರುತ್ತಾನೆ. ಚಾಸ 1 ರವರು ತನ್ನ ಮಗನನ್ನು ಮೈಸೂರಿನ ಜೆ.ಎಸ್.ಎಸ್ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲು ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-20: ಫ್ರಾಸಾ.08 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆದರೆ ಚಿಕಿತ್ಸೆ ಫಲಕಾರಿಯಾಗದೇ ಚಾಸ 1 ರವರ ಮಗ ಮೃತಪಟ್ಟಿರುತ್ತಾನೆ. ಚಾಸ 1 ರವರ ಮಗನ ಸಾವಿಗೆ ಆರೋಪಿ ಸರಿಯಾಗಿ ಇಂಜಕ್ಷನ್ ನೀಡದೇ ಇರುವುದು ಕಾರಣವಾಗಿರುತ್ತದೆ. ಆರೋಪಿ ಬಳಿ ಚಾಸ 1 ಮತ್ತು ನಮ್ಮ ಗ್ರಾಮಸ್ಥರು ಕೇಳಲಾಗಿ ಆತ ತನ್ನಿಂದ ತಪ್ಪಾಗಿರುತ್ತದೆ, ಪರಿಹಾರ ಕೊಡುತ್ತೇನೆ ಎಂದುತಿಳಿಸಿರುತ್ತಾನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-21: ಫ್ರಾಸಾ.08 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ರಾಜಿ ಪಂಚಾಯಿತಿ ಮಾಡಿದಾಗ ಆರೋಪಿ 10 ಲಕ್ಷ ಹಣ ನೀಡುವುದಾಗಿ ಒಪ್ಪಿ, ತನ್ನ ಹೆಸರಿನಲ್ಲಿದ್ದ ಮನೆಯನ್ನು ಚಾಸ 1 ರವರ ಹೆಸರಿಗೆ ಬರೆದುಕೊಟ್ಟಿರುತ್ತಾರೆ. ಆರೋಪಿ 2-3 ತಿಂಗಳು ಕಾಲ ಹಣ ನೀಡುವುದಾಗಿ ಹೇಳಿಕೊಂಡು ಕಾಲಹರಣ ಮಾಡಿ ಹಣವನ್ನು ನೀಡಿರುವುದಿಲ್ಲ. ಆ ಕಾರಣ ಚಾಸ 1 ರವರು ಠಾಣೆಗೆ ಹೋಗಿ ದೂರು ದಾಖಲು ಮಾಡಿರುತ್ತಾರೆ. ಪಂಚಾಯಿತಿ ಸಮಯದಲ್ಲಿ ನನ್ನನ್ನು ಹೊರತುಪಡಿಸಿ ಚಾಸ 12, 19 ಮತ್ತು ಇತರರು ಹಾಜರಿದ್ದರು. ಆರೋಪಿ

ನೋಡಿದರೆ ಗುರುತಿಸುತ್ತೇನೆ, ಈ ದಿನ ನ್ಯಾಯಾಲಯದ ಮುಂದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-22: ಫ್ರಾಸಾ.12, ಡಾಃ ದಯಾನಂದ್ ಆರ್, ಅಸೋಸಿಯೇಟ್ ಫ್ರೋಪೆಸರ್,ಮೈಸೂರು ಮೆಡಿಕಲ್ ಕಾಲೇಜು, ಮೈಸೂರು ಇವರು ತಮ್ಮ ಸಾಕ್ಷ್ಯದಲ್ಲಿ ನಾನು 2013 ರಿಂದ ಈ ದಿನದವರೆಗೆ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಅಸೋಸಿಯೇಟ್ ಫ್ರೋಪೆಸರ್ ಆಗಿ ಕೆಲಸ ನಿರ್ವಹಿಸುತ್ತಿದ್ದೇನೆ. ದಿನಾಂಕ 17.7.2018 ರಂದು ತಹಶೀಲ್ದಾರ್, ಹೆಚ್.ಡಿ.ಕೋಟೆ ರವರು ಸಲ್ಲಿಸಿದ ಕೋರಿಕೆಯ ಮೇರೆಗೆ ಮೃತ ನಾಗರಾಜು ಬಿನ್ ಲಿಂಗರಾಜು ರವರ ಶವದ ಪರೀಕ್ಷೆಯನ್ನು ಮದ್ಯಾಹ್ನ 2.05 ರಿಂದ 3.05 ರವರೆಗೆ ಸದರಿ ಮೃತ ಶವವನ್ನು ಅಂತಿಮ ಸಂಸ್ಕಾರ ಮಾಡಿದ್ದ ಕೋಹಳ ಗ್ರಾಮದಲ್ಲಿರುವ ಪಿರ್ಯಾದಿಯ ಜಮೀನಿನಲ್ಲಿ ನಡೆಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-23: ಫ್ರಾಸಾ.12 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಮೃತ ವ್ಯಕ್ತಿಯ ದೇಹವನ್ನು ಹೊರತೆಗೆದು ನೋಡಿದಾಗ ಅದು ಬಿಳಿ ಬಟ್ಟೆಯಿಂದ ಸುತ್ತಿದ್ದು, ನಂತರ ಸದರಿ ಬಿಳಿ ಬಟ್ಟೆಯನ್ನು ತೆಗೆದು ನೋಡಿದಾಗ ಮೃತ ಶರೀರದ ಮೇಲೆ ಒಂದು ಬಿಳಿ ಮತ್ತು ನೀಲಿ ಬಣ್ಣದ ಶರ್ಟ, ಒಂದು ಅಡಲ್ಟ್

ಡೈಪರ್, ಎಡಕುಂಡಿ ಮತ್ತು ತೊಡೆಯ ಮೇಲೆ ಆಸ್ಪತ್ರೆಯ ಬ್ಯಾಂಡೇಜ್ ಇತ್ತು ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-24: ಫ್ರಾಸಾ.12 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ದೇಹವನ್ನು ನೀರಿನಿಂದ ತೊಳೆದು ನೋಡಿದಾಗ ಅಲ್ಲಲ್ಲಿ ಮೂಳೆಗಳು ಕಾಣುತ್ತಿದ್ದವು. ಸದರಿ ದೇಹವು ಸುಮಾರು 18 ವರ್ಷದ ಯುವಕನದಾಗಿತ್ತು. ಸದರಿ ಮೃತ ದೇಹದ ಉದ್ದ 175 ಸೆಂ.ಮೀ ಇತ್ತು. ಅಲ್ಲಲ್ಲಿ ಮಾಂಸಖಂಡಗಳು ಮೂಳೆಗೆ ಅಂಟಿಕೊಂಡಿದ್ದವು. ನಂತರ ಅಸ್ಪತ್ರೆಯ ಬ್ಯಾಂಡೇಜನ್ನು ತೆಗೆದು ನೋಡಿದಾಗ ಸದರಿ ಎಡಕುಂಡಿಯ ಚರ್ಮ ಮತ್ತು ಮಾಂಸವು ಕೊಳೆತಿದ್ದು ಬಣ್ಣ ಮಾಸಿತ್ತು. ಸದರಿ ಮೃತ ಶರೀರದ ಕೂದಲನ್ನು ಎಳೆದಾಗ ಅದು ಸುಲಭವಾಗಿ ಕಿತ್ತುಬರುತ್ತಿತು. ನಂತರ ಸದರಿ ಮೃತದೇಹವನ್ನು ಛೇದಿಸಿ ನೋಡಿದಾಗ ತಲೆಬುರುಡೆ ಇಂಟ್ಯಾಕ್ಟ ಇತ್ತು ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-25: ಫ್ರಾಸಾ.12 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದೇಹದ ಇತರ ಒಳಭಾಗಗಳು ಕೊಳೆತು ಹೋಗಿದ್ದವು. ನಂತರ ಸದರಿ ಮೃತದೇಹ ಊಳಿದ್ದ ಜಾಗದ ಮೇಲ್ಬಾಗ ಮತ್ತು ಕೆಳಭಾಗದ ಮಣ್ಣನ್ನು ಹಾಗೂ ಸದರಿ ಮೃತದೇಹದಲ್ಲಿದ್ದ ಹಳದಿ ಕಪ್ಪು ಬಣ್ಣದ ಮಾಂಸವನ್ನು, ಎಡ ಮತ್ತು ಬಲಕುಂಡಿಯ ಕೊಳೆತ ಮಾಂಸವನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲು ಸ್ಥಳದಲ್ಲಿ ಸೀಲು ಮಾಡಿ ಅದನ್ನು ತನಿಖಾಧಿಕಾರಿಗೆ

ಹಸ್ತಾಂತರಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-26: ಫ್ರಾಸಾ.12 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದೇ ದಿನ ನಾನು ಪ್ರಾವಿಷನಲ್ ಒಪಿನಿಯನ್ ನೀಡಿದ್ದು, ವಿಧಿವಿಜ್ಞಾನ ಪ್ರಯೋಗಾಲಯದ ವರದಿ ಮತ್ತು ಆಸ್ಪತ್ರೆಯ ಕೇಸುಶೀಟನ್ನು ಪಡೆಯಲು ಅಂತಿಮ ವರದಿಯನ್ನು ಕಾಯ್ದಿರಿಸಿರುತ್ತೇನೆ. ನಂತರ ಎಫ್.ಎಸ್.ಎಲ್ ವರದಿ ಮತ್ತು ಆಸ್ಪತ್ರೆಯ ಕೇಸು ಶೀಟನ್ನು ಪರಿಶೀಲಿಸಿ ಸಾವಿನ ನಿಖರ ಕಾರಣವನ್ನು ಹೇಳಲು ಸಾಧ್ಯವಿಲ್ಲ, ಆದರೆ ಸದರಿ ವ್ಯಕ್ತಿಗೆ ಇಂಜಕ್ಷನ್ ಕೊಟ್ಟಿರುವುದರಿಂದ ತೀರಿಕೊಂಡಿರಬಹುದು ಎಂದು ನನ್ನ ಅಭಿಪ್ರಾಯ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-27: ಫ್ರಾಸಾ.12 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸಾಕ್ಷಿದಾರರು ಸದರಿ ಪಿ.ಎಂ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ20 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ20 ಎ ಎಂದು ಗುರುತಿಸಲಾಯಿತು. ಎಫ್.ಎಸ್.ಎಲ್ ವರದಿಯನ್ನು ತನಿಖಾಧಿರವರು ನನ್ನ ಮುಂದೆ ಹಾಜರುಪಡಿಸಿದ್ದು ಅದರ ಆಧಾರದ ಮೇರೆಗೆ ಪಿ.ಎಂ ವರದಿಯನ್ನು ನೀಡಿರುತ್ತೇನೆ. ಸಾಕ್ಷಿದಾರರು ಸದರಿ ಎಫ್.ಎಸ್.ಎಲ್ ವರದಿನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ21 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು

ನಿಪಿ21ಎ ಎಂದು ಗುರುತಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-28: ಫ್ರಾಸಾ.13, ಎಸ್.ಆನಂದ್, ಪೋಲಿಸ್ ಇನ್ಸ್‌ಪೆಕ್ಟರ್, ಕೆ.ಎಂ.ದೊಡ್ಡಿ, ಮಂಡ್ಯ ಇವರು ತಮ್ಮ ಸಾಕ್ಷ್ಯದಲ್ಲಿ ನಾನು ದಿನಾಂಕ 8.3.2019 ರಿಂದ 14.6.2019 ರವರೆಗೆ ಹೆಚ್.ಡಿ.ಕೋಟೆ ಪೋಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 3.6.2019 ರಂದು ಈ ಕೇಸಿನ ಕಡತಗಳನ್ನು ಚಾಸ41 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರಿಸಿ, ಅದೇ ದಿನ ಕೃತ್ಯ ನಡೆದ ಸ್ಥಳದ ಅಸೆಸ್‌ಮೆಂಟ್ ನೀಡುವಂತೆ ಚಾಸ32 ರವರಿಗೆ ಮನವಿಯನ್ನು ನೀಡಿರುತ್ತೇನೆ. ದಿನಾಂಕ 6.6.2019 ರಂದು ಚಾಸ32 ರವರಿಂದ ಆರೋಪಿಯ ಮನೆಗೆ ಸಂಬಂಧಪಟ್ಟ ಅಸೆಸ್ಸಮೆಂಟನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-29: ಫ್ರಾಸಾ.13ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸಾಕ್ಷಿದಾರರು ಸದರಿ ಅಸೆಸ್ಸಮೆಂಟಿನ ದೃಢೀಕೃತ ನಕಲನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ22 ಎಂದು, ಪಿ.ಡಿ.ಓ ರವರಿಗೆ ನೀಡಿದ ಮನವಿಯನ್ನು ನಿಪಿ23 ಎಂದು ಗುರುತಿಸಲಾಯಿತು. ಅದೇ ದಿನ ಆರೋಗ್ಯ ಮತ್ತು ಕುಟುಂಬ ಇಲಾಖೆಗೆ ಪತ್ರ ಬರೆದು ಆರೋಪಿಯು ನಿರ್ಲಕ್ಷತೆಯಿಂದ ಚಿಕಿತ್ಸೆ ನೀಡಿರುವ ಬಗ್ಗೆ ಅಭಿಪ್ರಾಯ ವರದಿ ಮತ್ತು ಆತನು ಅಧಿಕೃತ ವೈದ್ಯನೋ ಅಲ್ಲವೋ ಎಂದು

ವರದಿ ನೀಡುವಂತೆ ಎರಡು ಪತ್ರಗಳನ್ನು ಅಂಚೆ ಮೂಲಕ ಕಳುಹಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ–30: ಫ್ರಾಸಾ.13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸಾಕ್ಷಿದಾರರು ಸದರಿ ಪತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ24 ಮತ್ತು ನಿಪಿ25 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ24 ಎ ಮತ್ತು ನಿಪಿ25 ಎ ಎಂದು ಗುರುತಿಸಲಾಯಿತು. ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸ41 ರವರಿಗೆ ವರ್ಗಾಯಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ–31: ಫ್ರಾಸಾ.14, ಅಶೋಕ್ ವಿ.ಸಿ, ಪಿ.ಎಸ್.ಐ, ಬೆಳಕವಾಡಿ ಇವರು ತಮ್ಮ ಸಾಕ್ಷ್ಯದಲ್ಲಿ ನಾನು 26.6.2016 ರಿಂದ 8.3.2019 ಮತ್ತು ದಿನಾಂಕ 14.6.2019 ರಿಂದ 11.7.20019 ರವರೆಗೆ ಹೆಚ್.ಡಿ.ಕೋಟೆ ಪೋಲೀಸ್ ಠಾಣೆಯಲ್ಲಿ ಉಪನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 27.3.2018 ರಂದು ಈ ಕೇಸಿನ ಕಡತವನ್ನು ಚಾಸ39 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರಿಸಿರುತ್ತೇನೆ. ಅದೇ ದಿನ ಕೋಹಳ ಗ್ರಾಮಕ್ಕೆ ಭೇಟಿ ನೀಡಿ ಚಾಸ1 ರವರು ತೋರಿಸಿದ ಮೃತದೇಹ ಹೂತಿದ್ದ ಸ್ಥಳವನ್ನು ಪರಿಶೀಲಿಸಿ ಪಂಚರಾದ 4 ಮತ್ತು 5 ರವರ ಸಮಕ್ಷಮ

ಬೆಳಿಗ್ಗೆ 10 ರಿಂದ 10.45 ರವರೆಗೆ ನಿಪಿ3 ರಂತೆ ಸ್ಥಳ ಮಹಜರನ್ನು ಮಾಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-32: ಫ್ರಾಸಾ.14 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಿಪಿ3 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ3 ಸಿ ಎಂದು ಗುರುತಿಸಲಾಯಿತು. ನಂತರ ಅದೇ ದಿನ ಆರೋಪಿಯ ವಾಸದ ಮನೆಗೆ ಭೇಟಿ ನೀಡಿ ಪರಿಶೀಲಿಸಿ ಆರೋಪಿಯು ಪಿರ್ಯಾದಿ ಮಗನಿಗೆ ಅನಾರೋಗ್ಯದ ನಿಮಿತ್ತ ಇಂಜಕ್ಷನ್ ನೀಡಿರುವ ಸ್ಥಳವನ್ನು ತೋರಿಸಿದ ಮೇರೆಗೆ, ಚಾಸ 2 ಮತ್ತು 3 ರವರಿಗೆ ಲಿಖಿತ ನೋಟಿಸನ್ನು ನೀಡಿ ಪಂಚರಾಗಿ ಮಾಡಿಕೊಂಡು ಬೆಳಿಗ್ಗೆ 11.30 ರಿಂದ 12.30 ವರೆಗೆ ನಿಪಿ2 ರಂತೆ ಪಂಚನಾಮೆಯನ್ನು ಮಾಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-33: ಫ್ರಾಸಾ.14 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಿಪಿ2 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ2 ಬಿ ಎಂದು ಗುರುತಿಸಲಾಯಿತು. ಸಾಕ್ಷಿದಾರರಿಗೆ ನೀಡಿರುವ ನೋಟಿಸನ್ನು ನಿಪಿ26 ಎಂದು ಸಾಕ್ಷಿಯ ಸಹಿಯನ್ನು ನಿಪಿ26 ಎ ಎಂದು ಗುರುತಿಸಲಾಯಿತು. ನಂತರ ಅದೇ ದಿನ ಆರೋಪಿ ಪತ್ತೆಗೆ ಪ್ರಯತ್ನಿಸಿದ್ದು, ಆರೋಪಿಯು ತಲೆ ಮರೆಸಿಕೊಂಡಿರುತ್ತಾನೆ. ದಿನಾಂಕ 28.3.2018 ರಂದು ಹೂತಿರುವ ಮೃತದೇಹವನ್ನು ಹೊರತೆಗೆದು ಮರುಪರೀಕ್ಷೆ ಮಾಡಲು ಅನುಮತಿ ನೀಡುವಂತೆ ಹುಣಸೂರಿನ ಎ.ಸಿ ರವರಿಗೆ ಪತ್ರ ಬರೆದಿರುತ್ತೇನೆ. ಸಾಕ್ಷಿದಾರರು ಸದರಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ27 ಎಂದು, ಸಾಕ್ಷಿಯ ಸಹಿಯನ್ನು ನಿಪಿ27 ಎ

ಎಂದು ಗುರುತಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-34: ಫ್ರಾಸಾ.14 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅದೇ ದಿನ ಸಾಕ್ಷಿದಾರರಾದ ಚಾಸ 10 ರಿಂದ 16 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 29.3.2018 ರಂದು ಚಾಸ 17 ರಿಂದ 24 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 30.3.2018 ರಂದು ಸಾಕ್ಷಿದಾರರಾದ ಚಾಸ 25 ರಿಂದ 30 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 6.4.2018 ರಂದು ಹುಣಸೂರು ಎ.ಸಿ ರವರಿಂದ ಶವವನ್ನು ಹೊರತೆಗೆದು ಮರುಪರೀಕ್ಷೆ ಮಾಡಲು ಅನುಮತಿಯನ್ನು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-35: ಫ್ರಾಸಾ.14 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 15.5.2018 ರಂದು ಆರೋಪಿಯು ನಿರೀಕ್ಷಣಾ ಜಾಮೀನು ಪಡೆದುಕೊಂಡು ಠಾಣೆಗೆ ಹಾಜರಾಗಿದ್ದು, ಆತನನ್ನು ವಿಚಾರಣೆಗೊಳಪಡಿಸಿ ಆತನು ಹಾಜರುಪಡಿಸಿದ ಡಿಪ್ಲೋಮಾ ಕೋರ್ಸಿಗೆ ಸಂಬಂಧಿಸಿದ ಜೆರಾಕ್ಸ ಪ್ರತಿಯನ್ನು ಪಡೆದುಕೊಂಡು ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿನಾಂಕ 17.7.2018 ರಂದು ತಾಲ್ಲೂಕು ತಹಶೀಲ್ದಾರ್ ರವರು ಮೃತದೇಹವನ್ನು ಹೊರತೆಗೆದು ಮೈಸೂರಿನ ಕೆ.ಆರ್.ಆಸ್ಪತ್ರೆ ವೈದ್ಯಾಧಿಕಾರಿಯವರಿಂದ ಶವ ಪರೀಕ್ಷೆ ಮಾಡಲು ಅನುಮತಿ ನೀಡಿದ್ದು,

ಮಾನ್ಯ ತಹಶೀಲ್ದಾರ್ ಮತ್ತು ಕೆ.ಆರ್.ಆಸ್ಪತ್ರೆ ವೈದ್ಯಾಧಿಕಾರಿಯವರು ಮೃತದೇಹವನ್ನು ಹೊರತೆಗೆದು ಶವ ಪರೀಕ್ಷೆ ಮಾಡಿದ್ದು, ಸದರಿ ಸಮಯದಲ್ಲಿ ನಮ್ಮ ಠಾಣೆಯ ಸಿಬ್ಬಂಧಿಯಾದ ಚಾಸ 37 ಆದ ಚಂದ್ರಶೇಖರ್ ರವರು ಭಾವಚಿತ್ರವನ್ನು ತೆಗೆದಿದ್ದು, ಸದರಿ ಭಾವಚಿತ್ರಗಳು ಮತ್ತು ಸಿ.ಡಿ ಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿ ಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-36: ಫ್ರಾಸಾ.14 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅಲ್ಲದೇ ಚಾಸ 37 ರವರು ನೀಡಿರುವ ಕಲಂ 65 ಬಿ ಸಾಕ್ಷಿ ಅಧಿನಿಯಮ ದೃಢೀಕರಣ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಭಾವಚಿತ್ರಗಳು ಈಗಾಗಲೇ ನಿಪಿ5 ರಿಂದ ನಿಪಿ16 ಎಂದು ಗುರುತಾಗಿದ್ದು, ಸಿ.ಡಿ ಯನ್ನು ನಿಪಿ28 ಎಂದು ಗುರುತಿಸಲಾಯಿತು. 65 ಬಿ ಸಾಕ್ಷಿ ಅಧಿನಿಯಮ ದೃಢೀಕರಣ ಪತ್ರವನ್ನು ನಿಪಿ29 ಎಂದು ಗುರುತಿಸಲಾಯಿತು. ದಿನಾಂಕ 21.7.2018 ರಂದು ಜೆ.ಎಸ್.ಎಸ್ ಆಸ್ಪತ್ರೆ ಮತ್ತು ಕೆ.ಆರ್.ಆಸ್ಪತ್ರೆ ರವರಿಗೆ ಮೃತ ನಾಗರಾಜು ರವರು ಚಿಕಿತ್ಸೆ ಪಡೆದುಕೊಂಡಿರುವ ಬಗ್ಗೆ ಕೇಸ್ ಶೀಟ್ ಮತ್ತು ಇತರೆ ದಾಖಲಾತಿಗಳನ್ನು ಒದಗಿಸುವಂತೆ ಮನವಿ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-37: ಫ್ರಾಸಾ.14 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಮನವಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ನಿಪಿ30 ಎಂದು, ಸಾಕ್ಷಿಯ ಸಹಿಯನ್ನು ನಿಪಿ30 ಎ ಎಂದು ಗುರುತಿಸಲಾಯಿತು. ದಿನಾಂಕ

26.7.2018 ರಂದು ತಹಶೀಲ್ದಾರ್, ಹೆಚ್.ಡಿ.ಕೋಟೆ ರವರಿಂದ ಮೃತ ನಾಗರಾಜು ರವರ ಶವವನ್ನು ಹೊರತೆಗೆದು ಮಾಡಿರುವ ಶವ ಪಂಚನಾಮೆಯನ್ನು ನಿಪಿ4 ರಂತೆ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-38: ಪ್ರಾಸಾ.14 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 2.8.2018 ರಂದು ಜೆ.ಎಸ್.ಎಸ್ ಆಸ್ಪತ್ರೆ, ಮೈಸೂರು ಇವರಿಂದ ಮೃತ ನಾಗರಾಜು ರವರ ಚಿಕಿತ್ಸೆಯ ಕೇಸ್ ಶೀಟನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿದಾರರು ಸದರಿ ಕೇಸ್‌ಶೀಟನ್ನು ನೋಡಿ ಗುರುತಿಸಿದ್ದು, ಸದರಿ ಕೇಸ್ ಶೀಟನ್ನು (11 ಪುಟ) ನಿಪಿ31 ಎಂದು ಗುರುತಿಸಲಾಯಿತು. ದಿನಾಂಕ 3.8.2018 ರಂದು ಚಾಸ38 ರವರು ಕೆ.ಆರ್.ಆಸ್ಪತ್ರೆಯಲ್ಲಿ ಮೃತನ ಮರಣೋತ್ತರ ಪರೀಕ್ಷೆಯ ಸಮಯದಲ್ಲಿ ವೈದ್ಯಾಧಿಕಾರಿಯವರು ರಸಾಯನಿಕ ಪರೀಕ್ಷೆಗೆ ಸಂಗ್ರಹಿಸಿದ್ದ ವಸ್ತುಗಳನ್ನು ಮತ್ತು ವರದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಪಡೆದುಕೊಂಡು ಸ್ವತ್ತುಪಟ್ಟಿಯಲ್ಲಿ ಅಳವಡಿಸಿ ನ್ಯಾಯಾಲಯದ ಅನುಮತಿಯನ್ನು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-39: ಪ್ರಾಸಾ.14 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 10.8.2018 ರಂದು ರಸಾಯನಿಕ ಪರೀಕ್ಷೆಗೆ ಸಂಗ್ರಹಿಸಿಕೊಟ್ಟಿದ್ದ ವಸ್ತುಗಳನ್ನು

ಸಿಬ್ಬಂಧಿಯ ಮೂಲಕ ಮೈಸೂರಿನ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿರುತ್ತೇನೆ. ದಿನಾಂಕ 31.10.2018 ರಂದು ಎಫ್.ಎಸ್.ಎಲ್ ವರದಿಯನ್ನು ನಿಪಿ21 ರಂತೆ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಿಪಿ21 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ21 ಬಿ ಎಂದು ಗುರುತಿಸಲಾಯಿತು. ದಿನಾಂಕ 14.12.2018 ರಂದು ಮೃತ ನಾಗರಾಜು ಈತನ ಚಿಕಿತ್ಸೆಗೆ ಸಂಬಂಧಪಟ್ಟ ದಾಖಲಾತಿಗಳನ್ನು ಕೆ.ಆರ್.ಆಸ್ಪತ್ರೆ, ಮೈಸೂರು ರವರಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-40: ಫ್ರಾಸಾ.14 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ದಾಖಲಾತಿಯನ್ನು (ಒಟ್ಟು 10 ಪುಟ) ನಿಪಿ32 ಎಂದು ಗುರುತಿಸಲಾಯಿತು. ದಿನಾಂಕ 17.12.2018 ರಂದು ಮೃತ ವ್ಯಕ್ತಿಯ ಪಿ.ಎಂ ವರದಿಯನ್ನು ನೀಡುವಂತೆ ಕೇಳಿಕೊಂಡಿರುತ್ತೇನೆ. ಸಾಕ್ಷಿದಾರರು ಸದರಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ33 ಎಂದು, ಸಾಕ್ಷಿಯ ಸಹಿಯನ್ನು ನಿಪಿ33 ಎ ಎಂದು ಗುರುತಿಸಲಾಯಿತು. ದಿನಾಂಕ 1.1.2019 ರಂದು ಮೃತ ವ್ಯಕ್ತಿಯ ಅಂತಿಮ ಪಿ.ಎಂ ವರದಿಯನ್ನು ನಿಪಿ20 ರಂತೆ ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-41: ಫ್ರಾಸಾ.14 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕ **8.3.2019** ರಂದು ನನಗೆ ವರ್ಗಾವಣೆಯಾಗಿದ್ದರಿಂದ ಕಡತವನ್ನು ಮುಂದಿನ ತನಿಖೆಗಾಗಿ ಚಾಸ 40 ರವರಿಗೆ ವರ್ಗಾಯಿಸಿರುತ್ತೇನೆ. ದಿನಾಂಕ **14.6.2019** ರಂದು ಕೇಸಿನ ಕಡತವನ್ನು ಪುನಃ ಚಾಸ 40 ರವರಿಂದ ಪಡೆದುಕೊಂಡಿರುತ್ತೇನೆ. ನಂತರ ತನಿಖೆ ಪೂರ್ಣಗೊಂಡಿದ್ದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಬರಬೇಕಾಗಿದ್ದ ವರದಿಯನ್ನು ಕಾಯ್ದಿರಿಸಿ ದಿನಾಂಕ **23.6.2019** ರಂದು ನ್ಯಾಯಾಲಯಕ್ಕೆ ದೋಷರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ :

ಪ್ರಶ್ನೆ-42: ನಿಮ್ಮ ಪರ ವಿಚಾರಣೆ ಮಾಡಲು ಸಾಕ್ಷಿಗಳೇನಾದರೂ ಇದ್ದಾರೆಯೇ?

ಉತ್ತರ :

ಪ್ರಶ್ನೆ-43: ಈ ಪ್ರಕರಣದ ಬಗ್ಗೆ ನೀವು ನ್ಯಾಯಾಲಯಕ್ಕೆ ಹೆಚ್ಚಿಗೆ ಏನಾದರೂ ಹೇಳಲು ಬಯಸುವಿರಾ?

ಉತ್ತರ :

(ಮೇಲಿನ ಹೇಳಿಕೆಗಳನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಕನ್ನಡದಲ್ಲಿ ಬರೆದು, ಓದಿ ಹೇಳಿ ನಂತರ ಆರೋಪಿ ಉತ್ತರಿಸಿದ ಭಾಷೆಯಲ್ಲಿಯೇ ನನ್ನ ಸಮಕ್ಷಮದಲ್ಲಿ ಕೇಳಿ ಬರೆದುಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸುತ್ತೇನೆ)

SANDESH PRABHU B

Digitally signed by SANDESH PRABHU B
Date: 2024.07.1

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,
ಹೆಚ್.ಡಿ.ಕೋಟೆ

ದಿನಾಂಕಃ